# ನಿಸ್ವಾರ್ಥ ಸಮಾಜ ಸೇವಕ ಪ್ರಶಾಂತ್ ಕಲ್ಲೂರ್



**–ವಾಣಿ ಚಂದ್ರಯ್ಯನಾಯ್ಡು.** ಚಿಕ್ಕಮಗಳೂರು

ಮಾನವನ ಜೀವನ ಋಣಗಳ ದೊಡ್ಡ ಮೊತ್ತ. ಈ ಸಾಲಿನಲ್ಲಿ ಸಮಾಜದ ಋಣ ಬಹಳ ದೊಡ್ಡದು. ನಾವು ಬದುಕು ನಡೆಸುವ ಈ ಸಮಾಜದಿಂದ ಬೇಕಾದಷ್ಟು ಪಡೆದಿದ್ದೇವೆ. ಆ ಸಮಾಜದ ಋಣ ಸ್ವಲ್ಪವಾದರೂ ತೀರಿಸಬೇಕು. ಜೀವನದಲ್ಲಿ ನಮಗಿಂತ ಕಡಿಮೆ ಅದೃಷ್ಟವಂತರ, ಅವಕಾಶ ವಂಚಿತರ, ದುರ್ಬಲರ ಕಣ್ಣೊರೆಸಬೇಕು. ಸುತ್ತ ಮುತ್ತ ಇರೋ ಜನರಿಗೆ ಉಪಯೋಗವಾಗಿ ಬದುಕೋದೇ ಈ ಭೂಮಿಯ ಮೇಲೆ ಜೀವಿಸೋಕೆ ನಾವು ದೇವರಿಗೆ ಕೊಡೋ ಬಾಡಿಗೆ. ವ್ಯಕ್ತಿಯೊಬ್ಬ ಯಶಸ್ಸು ಸಾಧನೆ, ಕರ್ತವ್ಯ ನಿಷ್ಠೆ, ಉತ್ತಮ ಕರ್ಮಯೋಗಿ ಎನಿಸಿಕೊಳ್ಳುವುದು ಅಪರೂಪವಾದರೂ ಅಸಂಭವವಲ್ಲ. ತನ್ನ ಒಡಲಿನಲ್ಲಿ ಸಮಾಜವನ್ನು ತುಂಬಿಕೊಂಡು ಸಮಾಜಕ್ಕೆ ತನ್ನನ್ನು ಅರ್ಪಿಸಿಕೊಂಡವರು ವಿರಳಾತಿವಿರಳ, ಮೌಲ್ಯ ಕ್ಷಾಮದ ದಿನಗಳಲ್ಲಿ ವ್ಯಕ್ತಿಯೊಬ್ಬರು ಮೌಲ್ಯವಂತರಾಗಿರುವುದು ಸಾಧ್ಯ. ಇಂತವರು ತಾವೂ ಬದುಕಿ ಇತರರಿಗೂ ಬದುಕಗೊಡುತ್ತಾರೆ. ಉಳಿದವರಿಗೆ ಉದಾಹರಣೆಯಾಗುತ್ತಾರೆ. ಇನ್ನೆಲ್ಲರಿಗಿಂತ ಎತ್ತರ ಬೆಳೆದು ನಿಲ್ಲುತ್ತಾರೆ, ನಿಂತಿದ್ದಾರೆ, ಮುಂದೆಯೂ ನಿಂತಿರಲಿ.

ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು
ಕೂಡಲ ಸಂಗಮದೇವರ ನೆನೆವುತ್ತ
ನೆನೆವುತ್ತ ನೆನೆಯದಂತಿರಬೇಕು.

ಸಾರ್ವಜನಿಕ ಕೆಲಸ ಮಾಡುವವರಿಗೆ ಗುರಿ ಮತ್ತು ಕನಸುಗಳು ಇರಬೇಕು. ಬದಲಾಗುತ್ತಿರುವ ಜಗತ್ತಿನೊಡನೆ ನಾವು ಸೇರಿಕೊಳ್ಳುವುದು ಒಂದು ರೀತಿಯಾದರೆ, ನಾವೇ ಜಗತ್ತನ್ನು ಬದಲಾಯಿಸಲು ಹೊರಡುವುದು ಇನ್ನೊಂದು ರೀತಿ. ಈ ಎರಡನೇ ಸಾಲಿಗೆ ಸೇರುವವರೇ ಪ್ರಶಾಂತ್ ಕಲ್ಲೂರ್. ಸಂಘಟನೆ ಇವರ ಪ್ರಮುಖ

ವ್ಯಕ್ತಿತ್ವ, ತಮ್ಮ ಸಂಘಟನೆಯಲ್ಲಿ ಸೃಜನಶೀಲತೆ, ಕ್ರಿಯಾಶೀಲತೆಯನ್ನು ತುಂಬಿ, ತಮ್ಮ ಸಮುದಾಯವನ್ನು ಲವಲವಿಕೆಯಿಂದ ಇರುವ ಹಾಗೆ ಮಾಡುವುದರ ಜೊತೆ ಸಮುದಾಯದ ಕ್ಷೇಮ ಚಿಂತನೆಯನ್ನೇ ತಮ್ಮ ಹೆದ್ದಾರಿಯಾಗಿಸಿಕೊಂಡಿದ್ದಾರೆ.

ಅಪ್ಪಟ ಕನ್ನಡಾಭಿಮಾನಿಯಾಗಿರುವ ಪ್ರಶಾಂತ್ ನಿಗರ್ವಿ, ನಿರಾಡಂಬರ ವ್ಯಕ್ತಿ, ಆದರ್ಶ ಸಂಘಟಕರೂ ಜೊತೆಗೆ ಪ್ರಗತಿಪರ ಚಿಂತಕರು. ಪ್ರಾಮಾಣಿಕ ಸೇವಾ ಮನೋಭಾವ, ಆತ್ಮೀಯತೆ ವಿಶ್ವಾಸ ನಂಬಿಕೆಗೆ ಅರ್ಹ ವ್ಯಕ್ತಿ. ಹೆಸರಿಗೆ ತಕ್ಕ ಹಾಗೆ ಸದಾ ಪ್ರಶಾಂತವಾಗಿಯೇ ಇರುವ ಇವರ ಹೃದಯವಂತಿಕೆ ನೋಡಬೇಕಾದರೆ ಅವರ ಸಂಸ್ಥೆಗೆ ಭೇಟಿ ನೀಡಬೇಕು.

**ಸ್ಫೂರ್ತಿಯ ಚೇತನ**

ಮೂಲತ: ಕೊಡಗಿನ ಸುಂಟಿಕೊಪ್ಪದ ಕಲ್ಲೂರು ಇವರ ಊರು. ಸೆಪ್ಟೆಂಬರ್ ೧೦ರಂದು ಜನಿಸಿದರು. ತಮ್ಮ ವಿದ್ಯಾಭ್ಯಾಸವನ್ನು ಶಾಂತಿನಿಕೇತನ ಶಾಲೆಯಲ್ಲೂ, ಕುಮಾರ ಪಾರ್ಕ್ ಹೈಸ್ಕೂಲ್‌ನಲ್ಲಿಯೂ ಮತ್ತು ಹುಣಸೂರಿನ ಗೌರ್ನಮೆಂಟ್ ಕಾಲೇಜಿನಲ್ಲಿ ಪಿ.ಯು.ಸಿಯನ್ನು ಮುಗಿಸಿದರು. ನಂತರ ಕಾಮಾಕ್ಷಿಪಾಳ್ಯದ ರಾಮನ್ ಪಾಲಿಟೆಕ್ನಿಕ್‌ನಲ್ಲಿ ಐ.ಟಿ.ಐ ವ್ಯಾಸಂಗ ಮುಗಿಸಿ ಸಣ್ಣ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರುತ್ತಲೇ ತಮ್ಮ ಕನಸಿನ ಸಾಫ್ಟ್‌ವೇರ್ ಕಂಪೆನಿಯೊಂದನ್ನು ಪ್ರಾರಂಭಿಸಿ ಇಂದು ನೂರಾರು ಜನರ ಅನ್ನದಾತರಾಗಿದ್ದಾರೆ.

**ಸಾಧನೆಯ ಹಾದಿಯಲ್ಲಿ**

ವಿದ್ಯಾರ್ಥಿದೆಸೆಯಿಂದಲೂ ಹೋರಾಟದ ಕೆಚ್ಚನ್ನು ತಮ್ಮ ಮೈ ಮನದಲ್ಲಿ ಆವರಿಸಿಕೊಂಡು ಬಂದ ಇವರು ಅದಕ್ಕೊಂದು ಮೂರ್ತರೂಪವನ್ನು ಕೊಟ್ಟಿದ್ದು ತಮ್ಮದೇ "ವೀರಶೈವ ಲಿಂಗಾಯಿತ ಯುವ ವೇದಿಕೆ"ಯ ರಾಜ್ಯಾಧ್ಯಕ್ಷರಾಗುವುದರ ಮೂಲಕ. ೨೦೧೨ರಲ್ಲಿ ಮೂರು ಸದಸ್ಯರಿಂದ ಪ್ರಾರಂಭವಾದ ಸಂಸ್ಥೆ ಇಂದು ಇಡೀ ರಾಜ್ಯಾದ್ಯಂತ ಹತ್ತಾರು ಶಾಖೆಗಳೊಂದಿಗೆ ಸರಿ ಸುಮಾರು ೬ ಲಕ್ಷ ಸದಸ್ಯರನ್ನು ಒಳಗೊಂಡಿದೆ.

ಕೆಲವು ಘಟನೆಗಳು ನಮ್ಮ ಜೀವನದ ದಿಕ್ಕನ್ನೇ ಬದಲಾಯಿಸುತ್ತದೆ. ಅದೇ ರೀತಿ ಪ್ರಶಾಂತ್ ಜೀವನದಲ್ಲಿ ನಡೆದ ಈ ಘಟನೆ ಅವರ ಜೀವನದ ದಿಕ್ಕನ್ನೇ ಬದಲಾಯಿಸಿತೆಂದರೆ ತಪ್ಪಲ್ಲ. ಹಣಕಾಸಿನ ತೊಂದರೆ ಇಲ್ಲದ ಕುಟುಂಬದಿಂದ ಬಂದವರು, ನಂತರದಲ್ಲಿ ಸಾಕಷ್ಟು ಸಂಬಳದ ಕೆಲಸ, ಮುಂದೆ ತನ್ನದೇ ಸಾಫ್ಟ್‌ವೇರ್ ಕಂಪೆನಿಯ ಮಾಲೀಕ, ಕೈ ತುಂಬಾ ದುಡ್ಡು ಇರುವ ಪರಿಸ್ಥಿತಿಯಲ್ಲಿ ಯುವಕ ಪ್ರಶಾಂತ್‌ರವರ ಮೇಲೆ ಹತ್ತಾರು ಪರಿಣಾಮ ಬೀರಬಹುದಿತ್ತು, ಆದರೆ ಅನಿರೀಕ್ಷಿತವಾಗಿ ಒಮ್ಮೆ ಗೆಳೆಯರೊಡನೆ ನಡೆದಾಡುವ ದೇವರಿದ್ದ ತ್ರಿವಿಧ ದಾಸೋಹಿಗಳ ಶ್ರೀ ಸಿದ್ಧಗಂಗೆಯ ಮಠಕ್ಕೆ ಬಂದಾಗ ಅಲ್ಲಿನ ಪರಿಸರ, ಪೂಜ್ಯರ ಕೃಪಾಶೀರ್ವಾದ, ದಾಸೋಹ ಸೇವೆ ಎಲ್ಲವನ್ನೂ ನೋಡಿ ಯುವಕ ಪ್ರಶಾಂತರ ವ್ಯಕ್ತಿತ್ವ ಸಂಪೂರ್ಣ ಬದಲಾಯಿತು. ನಂತರದ್ದೆಲ್ಲಾ ಇತಿಹಾಸವೆಂದರೆ ಅತಿಶಯೋಕ್ತಿ ಅಲ್ಲ. ತಮ್ಮದೇ ಆದ ಸಂಸ್ಥೆಯ ಮೂಲಕ ಆಪ್ತರು, ಹಿತೈಷಿಗಳು, ಬಂಧುಗಳು, ಸ್ನೇಹಿತರು, ಸಮಾಜದವರನ್ನು ಒಗ್ಗೂಡಿಸಿಕೊಂಡು ಸಮಾಜಮುಖಿ ಕಾರ್ಯಗಳ ಮೂಲಕ ಎಲ್ಲರ ಪ್ರೀತಿಪಾತ್ರರಾಗಿದ್ದಾರೆ.

**ಸಮಾಜ ಸೇವೆಯ ಸಾರ್ಥಕ್ಯ**

ತಮ್ಮ ಸಂಸ್ಥೆಯನ್ನು ಕೇವಲ ಸಮುದಾಯದ ಸಂಘಟನೆಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ನೂರಾರು ಜನಪರ ಕಾಳಜಿಯ ಜೊತೆ ಸಮಾಜದ ಅಂತ್ಯಜರಿಗೆ, ದುರ್ಬಲರಿಗೆ ನೆರವಿನ ಹಸ್ತ ಚಾಚುತ್ತಾ ಎಲ್ಲರಲ್ಲೂ ಜಾಗೃತಿ ಮೂಡಿಸುತ್ತಿದ್ದಾರೆ. ಭ್ರಷ್ಟಾಚಾರದಲ್ಲಿ ತೊಡಗಿರುವವರನ್ನು, ಜನಪ್ರತಿನಿಧಿಗಳು ಕೆಲಸ ಮಾಡದಿದ್ದಾಗ ನೇರವಾಗಿ ಖಂಡಿಸುತ್ತಾರೆ. ಧರಣಿ ಸತ್ಯಾಗ್ರಹವನ್ನೂ ಮಾಡುತ್ತಾರೆ. ಧಾರ್ಮಿಕ ಕಾರ್ಯಕ್ರಮದ ಮೂಲಕ ಸಮುದಾಯದ ಜಾಗೃತಿ, ಸಾಧನೆ ಮಾಡಿದವರಿಗೆ ಗೌರವ, ವೃದ್ಧರಿಗೆ ಮಾಸಾಶನ, ಶಾಲೆಗಳಿಗೆ ಸ್ವಚ್ಛ ಕುಡಿಯುವ ನೀರಿನ ವ್ಯವಸ್ಥೆ, ಆಟೋಟ, ಪೀಠೋಪಕರಣಗಳ ಕೊಡುಗೆ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿಕೆ, ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ಅಪಘಾತ ವಿಮೆ ಸೌಲಭ್ಯ, ವಿಕಲ ಚೇತನರಿಗೆ ಅಗತ್ಯ ಸೌಲಭ್ಯ ನೀಡಿಕೆ, ತಮ್ಮ ಸಂಸ್ಥೆಯ ಮೂಲಕ 'ಬಸವ ಜ್ಯೋತಿ' ಮಾಸ ಪತ್ರಿಕೆಯನ್ನು ಹೊರ ತರುತ್ತಿದ್ದಾರೆ. ಪತ್ರಿಕೆಯ ಮೂಲಕ ಸಾಮಾಜಿಕ ಕಳಕಳಿ ಹಾಗೂ ಅಳಿವಿನ ಅಂಚಿನಲ್ಲಿರುವ ಸಮಾಜದ ಸ್ಥಿತಿ ಹಾಗೂ ಅದರ ಪರಿಹಾರೋಪಾಯಗಳನ್ನು ಎಲ್ಲರಿಗೂ ತಿಳಿಸುವ ಕೆಲಸ ಮಾಡುತ್ತಿದ್ದಾರೆ. ಹೀಗೆ ಒಂದೇ ಎರಡೇ ನೂರಾರು ಜನಪರ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ.

ಸಂಸ್ಥೆಯ ವತಿಯಿಂದ ಬಸವ ಜಯಂತಿಯನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ನಮ್ಮ ಬಸವಾದಿ ಶಿವಶರಣರ, ವಿಶ್ವಗುರು ಬಸವೇಶ್ವರರ ತತ್ವವನ್ನು, ವಚನಗಳ ಸಂದೇಶವನ್ನು ಎಲ್ಲರಿಗೂ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ.

ವೀರಶೈವ ಲಿಂಗಾಯತ ಯುವ ವೇದಿಕೆಯ ಪ್ರಮುಖ ಸಾಮಾಜಿಕ ಕೆಲಸವೆಂದರೆ ಕೊಡಗಿನ ನೆರೆ ಸಂತ್ರಸ್ತರಿಗೆ "ಶ್ರೀ ಸಿದ್ಧಗಂಗಾ ನಿಲಯ"ದ ನಿರ್ಮಾಣ ಮಾಡಿಕೊಟ್ಟಿರುವುದು. ಈ ಒಂದು ಮನೆಯ ನಿರ್ಮಾಣಕ್ಕೆ ಶ್ರೀ ಸಿದ್ಧಗಂಗೆಯ ಶ್ರೀಗಳು ಸ್ವತ: ತಮ್ಮ ಅಮೃತಹಸ್ತದಿಂದ ಒಂದು ಇಟ್ಟಿಗೆಯನ್ನು ಆಶೀರ್ವದಿಸಿ ಕೊಟ್ಟಿರುವುದು ವಿಶೇಷವಾದುದು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಗುರುಪುರ ಜಂಗಮ ಮಠದ ಉಳಿವಿಗಾಗಿ ವೇದಿಕೆ ಮೂಲಕ ಹೋರಾಟ ಮಾಡಿ ಜಯವನ್ನು ಸಾಧಿಸಿದ್ದಾರೆ. ನಾಡಿನ ಪ್ರಮುಖ ವೀರಶೈವ ಮುಖಂಡರುಗಳ ಸಾಧನೆಯನ್ನು ಸ್ಮರಿಸಿ ಅವರುಗಳ ಹೆಸರಿನಲ್ಲಿ 'ಬಸವ ಜ್ಯೋತಿ' ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ. ಪ್ರತೀ ರಾಜಕಾರಣಿಯ ಹೆಸರಿನಲ್ಲಿ ತಲಾ ೧೦ ಮಕ್ಕಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದಾರೆ. ವೀರಶೈವ ಲಿಂಗಾಯತ ವಿದ್ಯಾರ್ಥಿ ನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ದಿನನಿತ್ಯ ಉಪಯೋಗಿಸುವ ವಸ್ತುಗಳನ್ನು ವಿತರಿಸುತ್ತಿದ್ದಾರೆ. ಮಾನ್ಯ ಶ್ರೀ ಯಡಿಯೂರಪ್ಪ ಜನ್ಮ ದಿನದ ಪ್ರಯುಕ್ತ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ೧೦ ಲಕ್ಷ ರೂ ಅಪಘಾತ ವಿಮೆ ಸೌಲಭ್ಯ ಒದಗಿಸಿಕೊಟ್ಟಿದ್ದಾರೆ. ವೇದಿಕೆಯಿಂದ ೪೦೦ ಕ್ಕೂ ಹೆಚ್ಚು ಬಡ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ವಿಧವೆಯರಿಗೆ, ವೃದ್ಧರಿಗೆ ಮಾಸಿಕ ೫೦೦ ರೂಗಳನ್ನು ಪಿಂಚಣಿಯಾಗಿ ನೀಡುತ್ತಿದ್ದಾರೆ. ವೀರಶೈವ ಸಂಸ್ಕೃತಿಯ ಭಾಗವಾದ ವೀರಗಾಸೆಯ ಉಳಿವಿಗಾಗಿ ಶ್ರಮಿಸುತ್ತಿರುವ ಕಲಾವಿದರಿಗೆ ರಾಜ್ಯಮಟ್ಟದ ವೀರಗಾಸೆ ರತ್ನ ಪ್ರಶಸ್ತಿಯನ್ನು ನೀಡುತ್ತಿದ್ದಾರೆ. ಸಂವಿಧಾನ ವಿರೋಧಿ ಜಾತಿ ಜನಗಣತಿಯನ್ನು ವಿರೋಧಿಸಿ. ಕೇಂದ್ರದಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಎಲ್ಲ ಲಿಂಗಾಯತ ಉಪಪಂಗಡ ಸೇರಿಸಬೇಕು ಎಂದು ಒತ್ತಾಯಿಸಿ ಕೂಡಲಸಂಗಮದಿಂದ ಬೆಂಗಳೂರಿನವರೆಗೂ ಕಾಲ್ನಡಿಗೆ ಜಾಥವನ್ನು ಮಾಡಿದ್ದಾರೆ. ಅರ್ಚಕರು. ಆಗಮಿಕರಿಗೆ ಪ್ರಶಸ್ತಿ ನೀಡುತ್ತಿದ್ದಾರೆ.

ಹೀಗೆ ಒಂದೇ ಎರಡೇ ನೂರಾರು ಸಮಾಜೋದ್ಧಾರ ಕಾರ್ಯಗಳ ಮೂಲಕ ತಮ್ಮ ಯುವ ವೇದಿಕೆಯನ್ನು ನಿರಂತರ ಕಾರ್ಯೋನ್ಮುಖರಾಗಿಸಿದ್ದಾರೆ.

**ಬಹುಮುಖಿ ಜಂಟಲ್‌ಮ್ಯಾನ್**

ಶರಣ ಸಂಸ್ಕೃತಿಯಲ್ಲೇ ಅರಳಿರುವ ಪ್ರಶಾಂತ್ ಕಾಯಕವೇ ಕೈಲಾಸ ಎಂಬುದನ್ನು ಪಾಲಿಸುತ್ತಿರುವವರು. ತಮ್ಮ ಯುವ ವೇದಿಕೆಯ ಜೊತೆಯಲ್ಲೇ "ಕಲ್ಲೂರ್ ಎಂಟರ್‌ಟ್ರೈನ್‌ಮೆಂಟ್ ಸಂಸ್ಥೆ" ಯನ್ನು ಪ್ರಾರಂಭಿಸಿ ಆ ಮೂಲಕ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಇವರ ನಿರ್ಮಾಣದ ಲಾಸ್ಟ್ ಬಸ್ ಚಲನಚಿತ್ರ ಇತಿಹಾಸದಲ್ಲೇ ಹೊಸ ಪ್ರಯೋಗ. ಜೊತೆಗೆ ಸಂಗೀತ ಸಂಜೆಗಳನ್ನು ಆಯೋಜಿಸುತ್ತಾ ನಮ್ಮ ಚಿತ್ರರಂಗದ ದಿಗ್ಗಜರಿಗೆ ಗೌರವವನ್ನು ನೀಡುತ್ತಿದ್ದಾರೆ. ಕನ್ನಡ ನೆಲ. ಜಲ. ಕಲಾವಿದರು, ಸಂಗೀತ ನೃತ್ಯ ಸಂಸ್ಕೃತಿಯ ಸಂವರ್ಧನೆಗೆ ತಮ್ಮದೇಯಾದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತಿದ್ದಾರೆ. ಇವರು ನಡೆಸಿದ ಸಂಗೀತೋತ್ಸವಗಳೂ ಇಂದಿಗೂ ಜನಮಾನಸದಲ್ಲಿ ಹಚ್ಚಹಸಿರಾಗಿದೆ. ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಾ ಸ್ವರಮಾಧುರ್ಯ ರಸದೌತಣವನ್ನು ನೀಡಿದ್ದಾರೆ.

ಸಿನಿಮಾ, ನಾಟಕ ನಿರ್ಮಾಣ, ರಿಯಲ್ ಎಸ್ಟೇಟ್, ಪತ್ರಿಕಾ ರಂಗ ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ವಿಯಾಗಿದ್ದಾರೆ. ಸರ್ವಧರ್ಮ ಸಹಿಷ್ಣುತೆ, ಸಹಬಾಳ್ವೆ, ಶಾಂತಿಯ ಸಮಾಜ ನಿರ್ಮಾಣದ ಚಿಂತನೆಯನ್ನು ಹೊಂದಿರುವ ಸಮಾಜ ಸೇವಕ ಪ್ರಶಾಂತ್ ಅವರಿಗೆ ಹತ್ತಾರು ಪ್ರಶಸ್ತಿಗಳು ಲಭಿಸಿವೆ. ಯಾವುದೇ ಫಲಾಪೇಕ್ಷೆಯಿಲ್ಲದೆ ದುಡಿಯುತ್ತಿರುವ ನಿಸ್ಪೃಹರಾದ ಪ್ರಶಾಂತ್ ಅವರಿಗೆ ರಾಜ್ಯ ಸೇವಾ ರತ್ನ ಪ್ರಶಸ್ತಿ, ಸಮಾಜ ಸೇವಾ ಶ್ರೀ, ರಾಜ್ಯ ಪ್ರಜಾ ರತ್ನ, ಕಾಯಕ ಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಸದ್ಭಾವನ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಗಳು ಬಂದಿವೆ. ಈ ರೀತಿಯ ಸಮ್ಮಾನಗಳಿಂದ ಪ್ರಶಾಂತ್ ಬೀಗಿಲ್ಲ, ಬಾಗಿದ್ದಾರೆ ಜೊತೆಗೆ ತಮ್ಮ ಸೇವಾ ಮನೋಭಾವನೆಯನ್ನು ಹೆಚ್ಚಿನದಾಗಿಸಿಕೊಂಡಿದ್ದಾರೆ.

ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಬೆಳ್ಳಿ ಅಡ್ಡಪಲ್ಲಕ್ಕಿ, ಯುಗಮಾನೋತ್ಸವ ಹಾಗೂ ಧರ್ಮ ಜಾಗೃತಿ ಸಮಾರಂಭವನ್ನು ಬೆಂಗಳೂರು ಅರಮನೆ ಮೈದಾನದಲ್ಲಿ ಆಯೋಜಿಸುವುದರ ಮೂಲಕ ಒಂದು ಹೊಸ ಇತಿಹಾಸವನ್ನು ಸೃಷ್ಟಿಸಲು ತಮ್ಮ ಬಳಗದವರೊಡನೆ ಶ್ರಮಿಸುತ್ತಿದ್ದಾರೆ. ಕಾರ್ಯಕ್ರಮವು ಅತ್ಯಂತ ಅಭೂತಪೂರ್ವವಾಗಿ ಯಶಸ್ವಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

**ಸಾರ್ಥಕ ಬಾಳು**

ಸಂಘಟಿಸುವ ಹಿಂದಿರುವ ಕಾಳಜಿ, ಅವುಗಳಿಂದ ಸಿಗುವ ನೆಮ್ಮದಿ, ಸಾರ್ಥಕತೆ, ಧನ್ಯತೆಯ ಭಾವ ಪ್ರಶಾಂತರನ್ನು ಮತ್ತಷ್ಟು ಸುಂದರಗೊಳಿಸಿದೆ. ಇಂತಹ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಶಿಕ್ಷಣ, ಸಾಹಿತ್ಯ, ಸಂಗೀತ, ಕಲೆ, ವ್ಯವಸಾಯ, ಆರೋಗ್ಯ ಸೇವೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿ ಬಿಡುವಿಲ್ಲದಂತೆ ತೊಡಗಿಸಿಕೊಂಡಿದ್ದಾರೆ. ಸರಳತೆ, ಎಲ್ಲರ ಜೊತೆ ಬೆರೆಯುವ, ಗೌರವ ಕೊಡುವ ಸ್ವಭಾವ,

ನೋವಿನಲ್ಲಿ ಪಾಲ್ಗೊಳ್ಳುವ, ಧೈರ್ಯ ತುಂಬುವ, ಸಹಾಯಹಸ್ತ ನೀಡುವ ಇವರ ಸ್ವಭಾವವೇ ಪ್ರಶಾಂತರಿಗೆ ಅಪಾರ ಸ್ನೇಹಿತ, ಬಳಗವನ್ನು ತಂದುಕೊಟ್ಟಿದೆ.

ತನಗಾಗಿ ಅರಳುವುದು ಹೂವಲ್ಲ
ತನಗಾಗಿ ಬೆಳಗುವುದು ದೀಪವಲ್ಲ
ತನಗಾಗಿ ಬಾಳುವುದು ಬಾಳಲ್ಲ

ಎಂಬಂತೆ ಇದುವರೆಗಿನ ಬದುಕನ್ನು ಸಾರ್ಥಕಗೊಳಿಸಿಕೊಂಡಿರುವ ಪ್ರಶಾಂತ್ ಇನ್ನೂ ನೂರ್ಕಾಲ ಬದುಕಲಿ. ಆಯಸ್ಸು, ಆರೋಗ್ಯ, ಐಶ್ವರ್ಯ, ಸಕಲ ಸಿರಿ ಸಂಪತ್ತು ಇನ್ನೂ ಹೆಚ್ಚಲಿ ಆ ಮೂಲಕ ಅವು ಸಮಾಜಕ್ಕೆ ಅರ್ಪಣೆಯಾಗಲೆಂದು ಮನದುಂಬಿ ಹಾರೈಸುವೆ, ಮತ್ತೆ ಮತ್ತೆ ಶುಭ ಕೋರುವೆ.